# ಕಠಿಣ ಪರಿಸ್ಥಿತಿಗಳಲ್ಲಿ ಹಾಲುಣಿಸುವುದು

## ಅವಧಿಗೆ–ಮುಂಚೆ/ಕಡಿಮೆ ತೂಕದೊಂದಿಗೆ ಜನಿಸಿದ ಶಿಶುಗಳಿಗೆ ಹಾಲುಣಿಸುವುದು

- ಕಡಿಮೆ ತೂಕದೊಂದಿಗೆ ಜನಿಸಿದ ಶಿಶುಗಳಲ್ಲಿ ಆರಂಭದಲ್ಲೇ ಬುದ್ಧಿಮಾಂದ್ಯತೆ, ಸೋಂಕಿನ ಖಾಯಿಲೆಗಳು, ಬೆಳವಣಿಗೆ ನಿಧಾನವಾಗುವುದು, ಬಾಲ್ಯಾವಸ್ಥೆಯಲ್ಲೇ ಮರಣ ಸಂಭವಿಸುವುದು ಮೊದಲಾದ ಅನೇಕ ಅಪಾಯಗಳು ಬರಬಹುದು.
- ಕಡಿಮೆ ತೂಕ ಹೊಂದಿರುವ ಶಿಶುಗಳಿಗಾಗಿ ಹಾಲುಣಿಸುವಿಕೆ ಶಿಫಾರಸ್ಸುಗಳು ಈ ಕೆಳಗಿನಂತಿವೆ:
  - ಎಲ್ಲಾ ಶಿಶುಗಳಿಗೂ (ಕಡಿಮೆ ತೂಕದೊಂದಿಗೆ ಜನಿಸಿದ ಅಥವಾ ಅವಧಿಗೆ ಮುಂಚೆ ಜನಿಸಿದ ಶಿಶುಗಳಿಗೂ) ತಾಯಿ ಹಾಲು ಉಣಿಸಬೇಕು.
  - ಒಂದು ವೇಳೆ ಮಗುಗಳಿಗೆ ತಾಯಿ ಹಾಲು ಹೀರಲು ಸಾಧ್ಯವಾಗದಿದ್ದರೆ, ಒತ್ತಿ ತೆಗೆದ ಹಾಲನ್ನು ಸಣ್ಣ ಬಟ್ಟಲಿಗೆ ಸುರಿದು ಚಮಚ ಮೂಲಕ ಕುಡಿಸಬೇಕು.
  - ಕಡಿಮೆ ತೂಕದೊಂದಿಗೆ ಜನಿಸಿದ ಶಿಶುಗಳಿಗೆ ಕನಿಷ್ಠ 6 ತಿಂಗಳುಗಳ ವರೆಗೆ., (180 ದಿನಗಳು) ವಿಶೇಷವಾಗಿ ತಾಯಿ ಹಾಲನ್ನು ಮಾತ್ರವೇ ಉಣಿಸಬೇಕು ಮತ್ತು ಬೇರೆ ಏನನ್ನೂ ನೀಡಬಾರದು.
  - ಒಂದು ವೇಳೆ ಮಕ್ಕಳ ರೋಗ ತಜ್ಞರು ಶಿಫಾರಸ್ಸು ಮಾಡಿದಾಗ ಮಾತ್ರವೇ ಪರ್ಯಾಯವಾದ ಮೌಖಿಕ ಹಾಲುಣಿಸುವಿಕೆ ವಿಧಾನವನ್ನು ಅನುಸರಿಸಬಹುದಾಗಿದೆ.
  - ಅವಧಿಗೆ ಮುಂಚೆ ಜನಿಸಿರುವ ಮಕ್ಕಳಿಗೆ ಹಗಲು ಮತ್ತು ರಾತ್ರಿ ಎಂಬಂತೆ ಪ್ರತಿ ಎರಡು ಗಂಟೆಗೊಮ್ಮೆ ಹಾಲುಣಿಸುತ್ತಿರಬೇಕು.
  - ಕಾಂಗರೂ ಆರೈಕೆ ಕ್ರಮವನ್ನು ಅನುಸರಿಸಬೇಕು (ಮಗುವಿನೊಂದಿಗೆ ತ್ವಚೆಯಿಂದ ತ್ವಚೆಗೆ ಸಂಪರ್ಕ ಇರಿಸುವುದಕ್ಕಾಗಿ ತಾಯಿಯ ಸ್ತನಗಳ ನಡುವೆ ಸ್ಪರ್ಶಿಸುವಂತೆ ಮಗುವನ್ನು ಹತ್ತಿರದಲ್ಲಿ ಮಲಗಿಸಿಕೊಳ್ಳಬೇಕು).

**ಜನನ ವೇಳೆಯಲ್ಲಿ ಮಗುವಿನ ತೂಕ 2.5 ಕಿಲೋಗಿಂತ ಕಡಿಮೆಯಾಗಿದ್ದಲ್ಲಿ, ಅದನ್ನು ಜನನ ವೇಳೆಯಲ್ಲಿ ಕಡಿಮೆ ತೂಕ ಎನ್ನುತ್ತಾರೆ**

**ಗರ್ಭಧಾರಣೆ ಮಾಡಿದ 37 ವಾರಗಳ ಬಳಿಕ ಜನಿಸಿದ ಶಿಶುಗಳನ್ನು ಅವಧಿಗೆ ಮುಂಚೆ ಜನಿಸಿದ ಮಕ್ಕಳೆಂದು ಕರೆಯುತ್ತಾರೆ**

## ವಿಭಿನ್ನ ಪರಿಸ್ಥಿತಿಗಳಲ್ಲಿ ಹಸುಕೂಸುಗಳಿಗೆ ಹಾಲುಣಿಸುವುದು

- ಸಾಧಾರಣವಾಗಿ ಸಕ್ರಿಯವಾಗಿರುವ ಮಕ್ಕಳಿಗೆ ಆಗಾಗ ಹಾಲುಣಿಸುವುದು ಅಗತ್ಯವಾಗಿರುತ್ತದೆ.
- ವಿಭಿನ್ನ ಪರಿಸ್ಥಿತಿಯಲ್ಲಿ ಪರ್ಯಾಯವಾದ ಕಪ್ ಮತ್ತು ಚಮಚ ವಿಧಾನವನ್ನು ಉಪಯೋಗಿಸಬಹುದಾಗಿದೆ.
- ಹೆಚ್ಚು ಖಾಯಿಲೆ ಹೊಂದಿರುವ ಶಿಶುಗಳಿಗಾಗಿ ತಜ್ಞರ ಸಲಹೆ ಪಡೆಯಿರಿ.
- ಶಿಶುಗಳಿಗೆ ಆಗಾಗ ಸಣ್ಣದಾಗಿ ಉಣಿಸಿರಿ. ಕಕ್ಕಿ ಹೊರ ಹಾಕುವುದನ್ನು ತಪ್ಪಿಸುವುದಕ್ಕಾಗಿ 30 ನಿಮಿಷಗಳ ವರೆಗೆ ಮಗುವನ್ನು ನೇರ ಭಂಗಿಯಲ್ಲಿ ಇರಿಸಿ.
- ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗಾಗಿ ಆದ್ಯತೆಯ ಮೇಲೆ ಆರೋಗ್ಯ ಮತ್ತು ಪೌಷ್ಠಿಕಾಂಶಗಳನ್ನು ಒದಗಿಸಬೇಕು.
- ಹಾಲುಣಿಸುವ ಬಾಟಲಿಗಳ ಉಡುಗೊರೆಗಳನ್ನು ನಯವಾಗಿ ತಿರಸ್ಕರಿಸಬೇಕು. ಇವುಗಳ ಬಳಕೆಯನ್ನು ಪೂರ್ತಿಯಾಗಿ ನಿಲ್ಲಿಸಬೇಕು.
- ಎಲ್ಲಾ ಸಂದರ್ಭಗಳಲ್ಲೂ ಸಾಧ್ಯವಾದಷ್ಟು ಮಟ್ಟಿಗೆ ಜನಿಸಿದ ದಿನದಿಂದ ಕನಿಷ್ಠ 6 ತಿಂಗಳ ವರೆಗೆ ವಿಶೇಷವಾಗಿ ಮೊಲೆ ಹಾಲು ಉಣಿಸಬೇಕು ಮತ್ತು ಬೇರೆ ಏನನ್ನೂ ನೀಡಬಾರದು.
- ಉತ್ತಮವಾದ ಶುಚಿತ್ವ ಪರಿಸರದಲ್ಲಿ ಹಾಗೂ ಉತ್ತಮ ರೀತಿಯಲ್ಲಿ ಪೂರಕ ಆಹಾರಗಳನ್ನು ತಯಾರಿಸಬೇಕು.

## ಎಚ್.ಐ.ವಿ. ಹೊಂದಿರುವ ತಾಯಿ ಹಾಲುಣಿಸುವುದು

- ಜನಿಸಿದ ಮೊದಲನೇ 6 ತಿಂಗಳುಗಳ ವರೆಗೆ ವಿಶೇಷವಾಗಿ ತಾಯಿಯ ಹಾಲನ್ನು ಮಾತ್ರವೇ ಉಣಿಸಬೇಕು ಮತ್ತು ಬೇರೆ ಯಾವುದನ್ನೂ ನೀಡಬಾರದು.
- ಮಿಶ್ರಿತ ಉಣಿಸುವಿಕೆಯ ಅಭ್ಯಾಸ ಮಾಡಬಾರದು.
- ಮಗುವಿನಲ್ಲಿ ಎಚ್.ಐ.ವಿ. ಪತ್ತೆ ಮಾಡಿದಾಗ ಫಲಿತಾಂಶ ಹೌದಾಗಿರಲಿ ಅಥವಾ ಇಲ್ಲವಾಗಿರಲಿ, ಪೂರಕ ಆಹಾರ ಉಣಿಸುವಿಕೆಯನ್ನು ಕ್ರಮೇಣ ನಿಧಾನವಾಗಿ ಪ್ರಾರಂಭಿಸಬೇಕು.
- ಏಕಾಏಕಿ ಮೊಲೆ ಹಾಲು ಉಣಿಸುವುದನ್ನು ನಿಲ್ಲಿಸಬಾರದು. ಮೊಲೆ ಹಾಲು ಉಣಿಸುವುದನ್ನು ನಿಲ್ಲಿಸಲು ಬಯಸುವ ತಾಯಂದಿರು ಒಂದು ತಿಂಗಳಿನಿಂದ ಕ್ರಮೇಣವಾಗಿ ಅದನ್ನು ನಿಲ್ಲಿಸಬೇಕು.

### ಸುರಕ್ಷಿತ ಹಾಲುಣಿಸುವಿಕೆ ಕ್ರಮಗಳು

- ✓ ಜನಿಸಿದ ಒಂದು ಗಂಟೆ ಒಳಗಾಗಿ ಮೊಲೆ ಹಾಲು ಉಣಿಸಬೇಕು.
- ✓ ಮೊದಲ 6 ತಿಂಗಳುಗಳ ವರೆಗೆ ವಿಶೇಷವಾಗಿ ಮೊಲೆ ಹಾಲು ಮಾತ್ರವೇ ಉಣಿಸಬೇಕು. ಯಾವ ಸಂದರ್ಭದಲ್ಲೂ ಮಿಶ್ರಿತ ಉಣಿಸುವಿಕೆ ಮಾಡಬಾರದು.
- ✓ ಮೊಲೆ ಹಾಲು ಉಣಿಸುವ ತಂತ್ರೋಪಾಯಗಳನ್ನು ಪಾಲಿಸಬೇಕು.
- ✓ ಮಗುವನ್ನು ಸರಿಯಾಗಿ ಸ್ಥನಕ್ಕೆ ಸೇರಿಸಿಕೊಳ್ಳಬೇಕು.
- ✓ ಒಳಮುಖವಾಗಿರುವ ಸ್ಥನಗಳು, ಕೀವು ತುಂಬಿದ ಮೊಲೆ ತೊಟ್ಟು, ದುರ್ಬಲ ಸ್ಥನಗಳು ಮೊದಲಾದ ತೊಂದರೆಗಳನ್ನು ಗುರುತಿಸಬೇಕು ಮತ್ತು ಅವುಗಳನ್ನು ಸರಿಯಾಗಿ ನಿರ್ವಹಿಸಬೇಕು. ತೊಂದರೆಗೊಳಗಾಗಿರುವ ಸ್ಥನಗಳಿಂದ ಮಗುವಿಗೆ ಹಾಲುಣಿಸಬಾರದು.
- ✓ ಮಗುವಿನ ಬಾಯಲ್ಲಿ ಹುಣ್ಣುಗಳಿದ್ದಲ್ಲಿ, ಅಥವಾ ಸೋಂಕು ತಗುಲಿದ್ದಲ್ಲಿ, ಅಂತಹ ಸಮಸ್ಯೆಗಳನ್ನು ಚಿಕಿತ್ಸೆಗೊಳಪಡಿಸಬೇಕು.
- ✓ ಹಾಲುಣಿಸುವಿಕೆ ಸಂಪೂರ್ಣ ಅವಧಿಯಲ್ಲಿ ಮತ್ತೊಮ್ಮೆ ಸೋಂಕು ತಗುಲದಂತೆ ಎಚ್ಚರಿಕೆ ವಹಿಸುವುದಕ್ಕಾಗಿ ತಾಯಂದಿರು ಸುರಕ್ಷಿತ ಲೈಂಗಿಕ ಅಭ್ಯಾಸಗಳನ್ನು ಅನುಸರಿಸಬೇಕು ಹಾಗೂ ಅತ್ಯಂತ ಅಪಾಯದ ವರ್ತನೆಗಳನ್ನು ತಪ್ಪಿಸಬೇಕು.
- ✓ ಅಗತ್ಯವಿದ್ದಲ್ಲಿ ವೈದ್ಯರ ಸಹಾಯ ಪಡೆಯಬೇಕು.

### ಅಂಗನವಾಡಿ ಕಾರ್ಯಕರ್ತೆಯ ಜವಾಬ್ದಾರಿಗಳು

- ಎಲ್ಲಾ ಪರಿಸ್ಥಿತಿಗಳಲ್ಲೂ ಮೊಲೆ ಹಾಲು ಉಣಿಸುವಿಕೆ ಮತ್ತು ಪೂರಕ ಆಹಾರ ಉಣಿಸುವಿಕೆ ಕ್ರಮಗಳನ್ನು ಸರಿಯಾಗಿ ಪಾಲಿಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಬೇಕು.
- ನಿಮ್ಮ ಪ್ರದೇಶದಲ್ಲಿ ಉಡುಗೊರೆ ಮಾಡಿರುವ ಬಾಟಲ್‌ಗಳನ್ನು ಮತ್ತು ಹಾಲಿನ ಪುಡಿಯನ್ನು ತಿರಸ್ಕರಿಸಬೇಕು.
- ಅಸೌಖ್ಯದಲ್ಲಿರುವ ಮತ್ತು ಔಷಧಿ ಸೇವನೆ ಮಾಡುತ್ತಿರುವ ತಾಯಂದಿರು ಕೂಡಾ ಮಗುವಿಗೆ ತಾಯಿ ಹಾಲು ಉಣಿಸುವುದನ್ನು ಮುಂದುವರಿಸಬೇಕು. ಒಂದು ವೇಳೆ ವೈದ್ಯಕೀಯ ಕಾರಣಗಳಿಂದಾಗಿ ಹಾಲುಣಿಸಬಾರದೆಂದು ವೈದ್ಯರು ಶಿಫಾರಸ್ಸು ಮಾಡಿದಾಗ ಮಾತ್ರವೇ ತಾಯಿ ಹಾಲು ಉಣಿಸುವುದನ್ನು ನಿಲ್ಲಿಸಬೇಕು.
- ಒಂದು ವೇಳೆ ಯಾವುದೇ ವಿಪರೀತ ಸ್ಥಿತಿಯಿಂದಾಗಿ ತಾತ್ಕಾಲಿಕವಾಗಿ ಹಾಲುಣಿಸುವುದನ್ನು ನಿಲ್ಲಿಸಿದಲ್ಲಿ, ಸಾಧ್ಯವಾದಷ್ಟು ಬೇಗನೆ "ಮರು–ಹಾಲುಣಿಸುವಿಕೆ" ಪ್ರಾರಂಭಿಸಬೇಕು.
- ಒಂದು ವೇಳೆ ತಾಯಿ ಎಚ್.ಐ.ವಿ. ಹೊಂದಿದ್ದಲ್ಲಿ ನಿರ್ಧಿಷ್ಟವಾದ ಸಲಹೆ ಮತ್ತು ಮಾರ್ಗದರ್ಶನಗಳು ಹಾಗೂ ನಿರ್ವಹಣೆ ಕ್ರಮಗಳನ್ನು ತಿಳಿಸಬೇಕು.
- ಒಂದು ವೇಳೆ ತಾಯಿ ಎಚ್.ಐ.ವಿ. ಹೊಂದಿದ್ದಲ್ಲಿ (ಎಚ್.ಐ.ವಿ. ಹೊಂದಿದ್ದಾರೆ ಎಂದು ಗುರುತಿಸಲಾದ ತಾಯಂದಿರಿಗೆ) ಸೂಕ್ತವಾದ ಸಲಹೆ ಮತ್ತು ಮಾರ್ಗದರ್ಶನಗಳನ್ನು ಹಾಗೂ ಹಾಲುಣಿಸುವಿಕೆಗೆ ಇರುವ ಪರ್ಯಾಯ ವಿಧಾನಗಳನ್ನು ತಿಳಿಸಬೇಕು.